ಪುಸಲಾಯಿಸುತ್ತಾ, ಲಲ್ಲೆಗರೆಯುತ್ತಾ, ತನ್ನ ಜೇಬಿನಲ್ಲಿದ್ದ ನಾಣ್ಯಗಳನ್ನು ಜಣಜಣವೆನ್ನಿಸುತ್ತಾ ನಿಂತೇ ಇದ್ದ. ಆದರೆ, ಆಕೆ ಹಿಂದೆ ತಿರುಗಿ ಒಂದೇ ಒಂದು ಮಾತಿಲ್ಲದೆ ಹೊರಟುಹೋದಳು.

"ನೋಡಿವಳು, ಏನು ಕೊಬ್ಬು! ಎಷ್ಟು ಬಿಗುಮಾನ! ನಿಜ ಹೇಳಬೇಕೂಂದ್ರೆ ಇವಳೂ ಒಬ್ಬ ಬಜಾರೀನೆ" ಎಂದ ಮನ್ಸೂರ್ ನಗುವನ್ನು ತಡೆದುಕೊಳ್ಳುತ್ತಿರುವವನಂತೆ ಮೈ ಕುಲುಕಿಸುತ್ತ. "ತುಂಬಾ ಬೇಗಾನೇ ನನ್ನ ಬಲೆಗೆ ಬಿದ್ದುಬಿಡುತ್ತೆ ನೋಡ್ತಿರು, ಈ ಮಾಲು. ಎಷ್ಟು ತೊಗೋಬಹುದು ಗೊತ್ತಾ? ಇವರೆಲ್ಲಾ ಹೀಗೇನೇ, ಮಹಾ ಗರತೀರ ಹಾಗೆ ವೇಷ ಹಾಕೋದು, ಬಿಗುಮಾನ ತೋರ್ಸೋದು... ಒಂದು ಸಲ ನಮ್ಮ ಹಾಸಿಗೇಗೆ ಎಳ್ಕೊಂಡು ಒಳಗೆ ಹಾಕಿದರೆ ಸಾಕು, ಯಾರು ನಿಜವಾದ ದಣಿ ಅಂತ ಗೊತ್ತಾಗುತ್ತೆ ಇವರಿಗೆ."

ಹಮೀದ್ ಅವನನ್ನು ಸಮಾಧಾನ ಮಾಡುವಂತೆ ನಕ್ಕ. ಆದರೆ, ಅವಳೇನು ಕೊಂಡುಕೊಳ್ಳಬಹುದಾದ ಹುಡುಗಿ ಅಂತ ಅವನಿಗೆ ಅನ್ನಿಸಲಿಲ್ಲ. ಆಕೆಯ ಚಲನವಲನಗಳಲ್ಲಿ ಅದೆಷ್ಟು ಗಾಂಭೀರ್ಯವಿತ್ತೆಂದರೆ ಅವಳು ಮನ್ಸೂರನ ಬಲೆಗೆ ಬೀಳಬಹುದಾದ ಮಿಕ ಎಂದು ಅವನಿಗೆ ಕನಸುಮನಸಿನಲ್ಲಿಯೂ ನಂಬಲಾಗಲಿಲ್ಲ. ಆಮೇಲೆ ಅವನ ಮನಸ್ಸು ಮತ್ತೆ ಮತ್ತೆ ಆ ಹುಡುಗಿಯತ್ತ ತಿರುಗತೊಡಗಿತು. ಒಬ್ಬನೇ ಇದ್ದಾಗ ತಾನೇ ಅವಳ ಜೊತೆ ಆತ್ಮೀಯವಾಗಿ ಇರುವ ಹಾಗೆ ಏನೇನೋ ಭ್ರಮೆಗಳು. ರಾತ್ರಿ ಅಂಗಡಿಯ ಬಾಗಿಲು ಹಾಕಿದ ಮೇಲೆ ಅವನು ಸ್ವಲ್ಪ ಹೊತ್ತು ಮುದುಕ ಘರ್ಘೀರನ ಜೊತೆ ಕೂತುಕೊಳ್ಳುತ್ತಿದ್ದ. ಘರ್ಘೀರ್ ಅಂಗಡಿಯ ಮಾಲೀಕ; ಅಂಗಡಿಯ ಹಿಂಬದಿಯಲ್ಲೇ ವಾಸಮಾಡುತ್ತಿದ್ದವನು. ಅವನಿಗೆ ತನ್ನ ಯಾವ ಕೆಲಸವನ್ನೂ ಮಾಡಿಕೊಳ್ಳಲಾಗುತ್ತಿರಲಿಲ್ಲ. ಹಾಸಿಗೆ ಬಿಟ್ಟು ಏಳುತ್ತಿದ್ದುದೇ ಅಪರೂಪ. ಹಗಲು ಹೊತ್ತು ಹತ್ತಿರದಲ್ಲೇ ಇದ್ದ ಒಬ್ಬ ಹೆಂಗಸು ಅವನನ್ನು ನೋಡಿಕೊಳ್ಳಲು ಬರುತ್ತಿದ್ದಳು. ಅದಕ್ಕೆ ಪ್ರತಿಯಾಗಿ ಅಂಗಡಿಯಿಂದ ಅವಳಿಗೆ ಉಚಿತ ದಿನಸಿ ದೊರೆಯುತ್ತಿತ್ತು. ಆದರೆ, ರಾತ್ರಿಯ ಹೊತ್ತು ಮುದುಕನಿಗೆ ಸ್ವಲ್ಪ ಸಮಯವಾದರೂ ಹಮೀದ್ ತನ್ನ ಜೊತೆ ಕೂತಿರಬೇಕೆಂಬ ಆಸೆ. ಇಬ್ಬರೂ ಮಾತಾಡುತ್ತಿರುವಾಗ ಆ ಕೋಣೆಯ ತುಂಬ ಸಾಯುತ್ತಿರುವ ಮನುಷ್ಯನ ವಾಸನೆ. ಅಂಗಡಿಯಲ್ಲಿ ಸರಿಯಾಗಿ ವ್ಯಾಪಾರವಾಗುತ್ತಿಲ್ಲ, ದೇವರು ಕಣ್ಣುಬಿಟ್ಟು ತನ್ನ ಆರೋಗ್ಯ ಸುಧಾರಿಸಲಿ, ಇತ್ಯಾದಿ ಬಿಟ್ಟರೆ ಮಾತಾಡುವುದಕ್ಕೆ ಹೆಚ್ಚೇನೂ ಇರುತ್ತಿರಲಿಲ್ಲ. ಒಮ್ಮೊಮ್ಮೆ ಘರ್ಘೀರ್ ಅಷ್ಟೇನೂ ಲವಲವಿಕೆಯಿಲ್ಲದ ಸಮಯದಲ್ಲಿ ಸಾವಿನ ಬಗ್ಗೆ, ಪರಲೋಕದ ಬಗ್ಗೆ ಹನಿಗಣ್ಣಾಗಿ ಮಾತಾಡುತ್ತಿದ್ದುದುಂಟು. ಆಮೇಲೆ ಹಮೀದ್ ಅವನನ್ನು ಟಾಯ್ಲೆಟ್ಟಿಗೆ ಕರೆದುಕೊಂಡು ಹೋಗುತ್ತಿದ್ದ; ಅವನ ಚೇಂಬರ್–ಪಾಟ್ ಸ್ವಚ್ಛವಾಗಿರುವಂತೆ ನೋಡಿಕೊಂಡು ಅವನಿಂದ ಬೀಳ್ಕೊಳ್ಳುತ್ತಿದ್ದ. ಘರ್ಘೀರನಾದರೋ, ರಾತ್ರಿ ಎಷ್ಟೋ ಹೊತ್ತಾದ ಮೇಲೆ ತನಗೆ ತಾನೇ ಮಾತಾಡಿಕೊಳ್ಳುತ್ತಿದ್ದ; ಕೆಲವೊಮ್ಮೆ ತುಸು ದನಿಯೇರಿಸಿ ಹಮೀದನ ಹೆಸರು ಹಿಡಿದು ಕೂಗುತ್ತಿದ್ದ.

ಹಮೀದ್ ಮಲಗುತ್ತಿದ್ದದ್ದು ಒಳ ಅಂಗಳದಲ್ಲಿ. ಮಳೆಯಿದ್ದಾಗ ಆ ಪುಟ್ಟ ಅಂಗಡಿಯಲ್ಲೇ ಒಂದಿಷ್ಟು ಜಾಗ ಮಾಡಿಕೊಂಡು ಬಿದ್ದುಕೊಳ್ಳುತ್ತಿದ್ದ. ರಾತ್ರಿಯ ಹೊತ್ತು ಒಬ್ಬನೇ; ಹೊರಗೆಲ್ಲೂ ಹೋಗುತ್ತಿರಲಿಲ್ಲ. ಹಾಗೆ ನೋಡಿದರೆ, ಅವನು ಅಂಗಡಿಯಿಂದ ಹೊರಗೆ ಕಾಲಿಟ್ಟು ಒಂದು ವರ್ಷದ ಮೇಲಾಗಿತ್ತು. ಅದಕ್ಕೆ ಮೊದಲು ಘರ್ಘೀರನ ಜೊತೆ ಹೋಗಿದ್ದಷ್ಟೆ – ಅದೂ ಘರ್ಘೀರ ಹಾಸಿಗೆ ಹಿಡಿಯುವುದಕ್ಕೆ ಮುಂಚೆ. ಘರ್ಘೀರ್ ಪ್ರತಿ ಶುಕ್ರವಾರ ಅವನನ್ನು ಮಸೀದಿಗೆ ಕರೆದುಕೊಂಡುಹೋಗುತ್ತಿದ್ದ. ಬೀದಿಗಳಲ್ಲಿ ಜನಜಂಗುಳಿ, ಕಾಲುಹಾದಿಯ ಒಡೆದ ಚಪ್ಪಡಿಗಳಿಂದ ಹಬೆಯೆಬ್ಬಿಸುತ್ತಿದ್ದ ಮಳೆ, ಇವೆಲ್ಲ ಅವನ ನೆನಪಿನಲ್ಲಿದ್ದವು. ಮನೆಗೆ ಹಿಂತಿರುಗುವ ದಾರಿಯಲ್ಲಿ ಅವರು ಮಾರುಕಟ್ಟೆಗೆ ಹೋಗುತ್ತಿದ್ದರು. ಮುದುಕ ಘರ್ಘೀರ್ ಕೆಲವು ರುಚಿರುಚಿಯ ಹಣ್ಣುಗಳ,